ನನಗೆ ಬಹಳ ವಿಚಿತ್ರವೆನಿಸಿತು. ಕಾರ್ಮಿಕರು ಕಷ್ಟದಲ್ಲಿದ್ದಾಗ ಕಾಣಿಸದ ಆಡಳಿತ, ಪ್ರಶಸ್ತಿ ಬರುತ್ತಲೇ 'ನಮ್ಮ ಸ್ಟೇಷನ್ನಿನವನು, ನಮ್ಮ ಸ್ಟೇಷನ್ನಿನವನು' ಎಂದು ಬಡಿದುಕೊಳ್ಳುವುದು, ಇವೆಲ್ಲ ಸತ್ಯಂ ಮನಸಿನಲ್ಲಿ ಗುಂಯ್‌ಗುಡುತ್ತಿವೆ. ತನ್ನಲ್ಲಿ ತಾನು ಮಾತನಾಡಿಕೊಳ್ಳುವುದು, ಯಂತ್ರಗಳ ಮೇಲೆ ಕೋಪ ಪ್ರದರ್ಶಿಸುವುದು, ಬೈಯುವುದು ಬಹಳ ವಿಚಿತ್ರವೆನಿಸುತ್ತಿದೆ ನನಗೆ.

ಯಾವಾಗಲೂ ನಿಧಾನವಾಗಿ ಡ್ರೈವರ್ ಕ್ಯಾಬಿನೆಟ್‌ನಲ್ಲಿ ಎಲ್ಲ ಸರಿಯಾಗಿದೆಯೇ ಎಂದು ಖಚಿತಪಡಿಸಿಕೊಂಡು ನಂತರ ಬಹಳ ನಿಧಾನವಾಗಿ ಎಂಜಿನ್ ಸ್ಟಾರ್ಟ್ ಮಾಡುವವನು, ಇಂದು ಕ್ಯಾಬಿನ್ ಪ್ರವೇಶಿಸುತ್ತಿದ್ದಂತೆಯೇ ಬರ್ರ...ರ್... ಎಂದು ಬಹಳ ನಿರ್ಲಕ್ಷ್ಯವಾಗಿ ಎಂಜಿನ್ ಸ್ಟಾರ್ಟ್ ಮಾಡಿದ್ದು ನನಗೆ ಬಹಳ ಆಶ್ಚರ್ಯವಾಗುತ್ತಿದೆ. ಸ್ಟಾರ್ಟ್ ಆದ ಕೆಲಹೊತ್ತಿನಲ್ಲೇ ಎಂಜಿನ್ ವೇಗ ಎಪ್ಪತ್ತು ಕಿಲೋಮೀಟರಿಗೇರಿತು. ನಿಯಮಾನುಸಾರ ಐವತ್ತು ಕಿಲೋಮೀಟರ್ ಕೂಡ ದಾಟಬಾರದು. ಹೇಳೋಣ ಎಂದುಕೊಂಡೆನಾದರೂ, ಮೊದಲೇ ಪ್ರಶಸ್ತಿ ಗಳಿಸಿರುವ, ಸೀನಿಯರ್ ಡ್ರೈವರ್‌ಗೆ ಹೇಳುವುದೆಂದರೆ ಮೊಟ್ಟೆ ಬಂದು ಮರಿಯನ್ನು ಗೇಲಿಮಾಡಿದಂತಿರುತ್ತದೆ ಎಂದುಕೊಂಡು ಹೇಳಲಿಲ್ಲ. ಸಿಗ್ನಲ್ಸ್ ನೋಡುತ್ತ ನನ್ನನ್ನು ಕೇಳಿ ಗಾಡಿ ಚಲಾಯಿಸಬೇಕಿದ್ದವನು ನನ್ನ ಪ್ರಮೇಯವೇ ಇಲ್ಲದೆ ಓಡಿಸುತ್ತಿದ್ದಾನೆ. ಸ್ವಲ್ಪಹೊತ್ತಿನ ನಂತರ ನಿಧಾನವಾಗಿ ಬಾಯಿ ಬಿಟ್ಟನು. ಮಾತಿನ ನಡುವೆ ಬಹಳ ವಿಷಯ ತಿಳಿದುಕೊಂಡೆ. ಮಕ್ಕಳಿಗೆ ಫೀಸ್ ಕಟ್ಟಬೇಕು, ಏಳು ತಿಂಗಳಿನಿಂದ ಸಂಬಳವಿಲ್ಲ, ಮಗನಿಗೆ ಉನ್ನತ ಶಿಕ್ಷಣದ ಜೊತೆಗೆ ಐಎಎಸ್ ಸ್ಪರ್ಧಾತ್ಮಕ ಪರೀಕ್ಷೆಗೆ ಸೇರಿಸಿರುವುದಾಗಿ ಹೇಳಿದನು. ಮಗ ಕಲೆಕ್ಟರ್ ಆಗಬೇಕೆನ್ನುವ ಸತ್ಯಂ ಆಸೆ ಅವನ ಮಾತಿನಿಂದ ತಿಳಿಯುತ್ತಿದೆ. ಯಾವಾಗಲೂ ಉಲ್ಲಾಸವಾಗಿ ಹೈಫೈ ಕೊಟ್ಟು ಮಾತನಾಡುವ ಸತ್ಯಂ ಇವತ್ತು ಮುಖ ಕೂಡ ನೋಡದೆ ಎಲ್ಲೋ ನೋಡಿಕೊಂಡು ಮಾತನಾಡುತ್ತಿದ್ದಾನೆ. ಕನಿಷ್ಠ ಸಿಗ್ನಲ್ಸ್ ಕೂಡ ನೋಡುತ್ತಿರುವ ಹಾಗಿಲ್ಲ. ಮಕ್ಕಳ ಓದು, ಕಾಲೇಜು ಫೀಸ್, ಮನೆ ಖರ್ಚು, ಹೀಗೆ ಏಳು ತಿಂಗಳಿನಿಂದ ವೇತನವಿಲ್ಲದೆ ಸಾಲ ಬೆಳೆದಿದೆ. ಈ ಏಳು ತಿಂಗಳ ಸಂಬಳ ಸಿಗುತ್ತದಾ ಇಲ್ಲವಾ ಎಂದು ಒಂದೇ ಯೋಚನೆ. ಕೆಲವೊಮ್ಮೆ ನಾನು ಪಕ್ಕದಲ್ಲಿದ್ದೇನೆಂಬುದು ಅರಿವಿಲ್ಲದಂತೆ ನಾನು ಮಾಡಬೇಕಿರುವ ಕೆಲಸವನ್ನು ತಾನೇ ಮಾಡುತ್ತಿದ್ದಾನೆ. ನಾನು ಹೇಳಿದರೂ ಕೇಳುವ ಪರಿಸ್ಥಿತಿಯಲ್ಲಿಲ್ಲ.

ಯಾಕೋ ಮನಸಿಗೆ ಕೇಡಿನ ಸಂದೇಹ ಕಾಡುತ್ತಿದೆ. ಇಂತಹ ಪರಿಸ್ಥಿತಿ ನನ್ನ ಕೆಲಸದಲ್ಲಿ ಎಂದಿಗೂ ಎದುರಾಗಿರಲಿಲ್ಲ. ಏನು ಮಾಡಬೇಕೆಂದು ಯೋಚಿಸುತ್ತಿದ್ದೇನೆ. ಅಷ್ಟರಲ್ಲಿ ನಾನು ಏನು ಆಗಬಾರದೆಂದುಕೊಂಡೆನೋ ಅದೇ ಆಯಿತು. ಅದೇ ರೆಡ್ ಸಿಗ್ನಲ್ ಜಂಪ್. ಗಾರ್ಡ್ ಕೆಂಪು ಬಾವುಟ ಹಾರಿಸುತ್ತಿದ್ದಾನೆ, ಅದುವರೆಗೂ ತಿಳಿಯಲಿಲ್ಲ ಯಾವುದೋ ಅಪಾಯ ಕಾದಿದೆಯೆಂದು. ಎಲ್ಲೋ ಸಿಗ್ನಲ್‌ಗಾಗಿ ನಿಲ್ಲಬೇಕಿದ್ದ ರೈಲು ಈಗ ಅಪಾಯದ ಅಂಚಿನಲ್ಲಿದೆ. ಎಂತಹ ಅಪಾಯದಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆಂದು ಕೂಡ ತಿಳಿಯುತ್ತಿಲ್ಲ. ಗಾರ್ಡ್ ಆತಂಕದಿಂದ, ಏನೋ ಹೇಳಲು ಪ್ರಯತ್ನಿಸುತ್ತಿದ್ದಾನೆ, ಆದರೆ ನಮಗೆ ಅದೇನೂ ಕೇಳಿಸಲಿಲ್ಲ. ಹತ್ತಿರ ಬರುವವರೆಗೂ ಗಾರ್ಡ್ ಇರುವುದು ಗೊತ್ತಾಗಲಿಲ್ಲ. ಏಕೆ ಕೆಂಪು ಬಾವುಟ ಹಾರಿಸಿದ ಗೊತ್ತಿಲ್ಲ. ಕೂಡಲೇ ಡ್ರೈವರ್ ಸತ್ಯಂ ಸಡನ್ ಬ್ರೇಕ್ ಹಾಕಿದ. ಆದರೆ ಅಷ್ಟು ವೇಗವಾಗಿ ಬ್ರೇಕ್ ಹಾಕುವ ವೇಳೆಗೆ ಬ್ರೇಕ್ಸ್ ಜಾಮ್ ಆದವು. ಇಬ್ಬರೂ ತಲೆ ಹೊರಹಾಕಿ ನೋಡಿದೆವು. ದೂರದ ಹಳಿಗಳ ಮೇಲೆ ರೈಲು ನಿಂತಿದೆ. ಆಗ ನಮ್ಮಿಬ್ಬರ ಎದೆ ಧಸಕ್ಕೆಂದಿತು. ಈಗಲೇ ಬ್ರೇಕ್ ಹಟ ಹಿಡಿದಿವೆ. ಯಾವುದೇ ಸಮಯದಲ್ಲಿ ಆ ರೈಲಿಗೆ ಢೀ ಹೊಡೆಯುವುದು ಖಚಿತ! ಅದು ಪ್ಯಾಸೆಂಜರ್ ರೈಲಾ? ಗೂಡ್ಸಾ? ಅದರಲ್ಲಿ ಎಷ್ಟು ಜನ ಪ್ರಯಾಣಿಕರಿದ್ದಾರೆ? ಆ ವಿವರಗಳಾವುದೂ ಗೊತ್ತಿಲ್ಲ. ನಮಗಿರುವ ಒಂದೇ ಮಾರ್ಗವೆಂದರೆ, ರೈಲಿನಿಂದ ಧುಮುಕಿ ಪ್ರಾಣ ಉಳಿಸಿಕೊಳ್ಳುವುದು. ಯೋಚನೆ ಮಾಡುವಷ್ಟು ಸಮಯವಿಲ್ಲ. ಆದರೆ ನಮ್ಮ ರೈಲು ಎಷ್ಟು ಪ್ರಾಣಗಳನ್ನು ಬಲಿ ತೆಗೆದುಕೊಳ್ಳುತ್ತದೆಯೋ..? ಎಷ್ಟು ಭೀಕರತೆ ಸೃಷ್ಟಿಸಲಿದೆಯೋ..? ಊಹಿಸಲೂ ಧೈರ್ಯ ಸಾಲುತ್ತಿಲ್ಲ.

'ಕೃಷ್ಣ... ಜಂಪ್... ಕೃಷ್ಣ ಜಂಪ್' ಎಂದು ಸತ್ಯಂ ಕೂಗುತ್ತಿದ್ದಾನೆ. ಬಾಯಲ್ಲಿ ಮಾತು ಕೂಡ ಹೊರಡುತ್ತಿಲ್ಲ. ಕೈಕಾಲು ನಿಯಂತ್ರಣದಲ್ಲಿಲ್ಲ. 'ಸತ್ಯಂ ನೀನು...' ಎಂದಷ್ಟೇ ಕೇಳಿದೆ.

'ಕೃಷ್ಣಾ ಒಂದು ಮಾತು. ನನ್ನ ಮಗ ಕಲೆಕ್ಟರಾಗಬೇಕು. ಮಗಳು ಡಾಕ್ಟರಾಗಬೇಕು. ಎಂತಹ ಪರಿಸ್ಥಿತಿಯಲ್ಲೂ ಅವರ ವ್ಯಾಸಂಗ ನಿಲ್ಲಬಾರದೆಂದು ಹೇಳು.'

'ಸತ್ಯಂ... ಏನು ಮಾತನಾಡುತ್ತಿದ್ದೀಯ. ಬಾ ಇಬ್ಬರೂ ಒಟ್ಟಿಗೇ ಧುಮುಕೋಣ!'

ಗಟ್ಟಿಯಾಗಿ ಕೈ ಹಿಡಿದುಕೊಂಡೆ, ಒಂದು ಕಡೆ ಧುಮುಕಲು ಭಯ. ಇನ್ನೊಂದು ಕಡೆ ಕೆಲವೇ ಕ್ಷಣಗಳಲ್ಲಿ ಸುಟ್ಟು ಭಸ್ಮವಾಗಲಿರುವ ರೈಲು.

'ಕೃಷ್ಣಾ... ಈಗ ನಾನು ಹೊರಗೆ ಹಾರಿ ಬದುಕಿದರೂ, ಕೇವಲ ಪ್ರಾಣ ಉಳಿಯುತ್ತದೆ. ಆದರೆ... ಡಿಪಾರ್ಟ್‌ಮೆಂಟಿನಿಂದ ಒಂದು ಪೈಸೆ ಬರುವುದಿಲ್ಲ. ಅದಲ್ಲದೆ, ನನ್ನ ನಿರ್ಲಕ್ಷ್ಯ ಎಂದು ಜೈಲಿಗೆ ಹಾಕುತ್ತಾರೆ. ಮಕ್ಕಳ ಶಿಕ್ಷಣ ನಿಂತುಹೋಗುತ್ತದೆ. ನನ್ನ ಮಗಳು ಡಾಕ್ಟರಾಗಬೇಕೆಂಬ ನನ್ನಾಸೆ ನೆರವೇರುವುದಿಲ್ಲ. ಕಲೆಕ್ಟರಾಗಬೇಕೆಂದು ಮಗ ಪಡುತ್ತಿರುವ ಕಷ್ಟ ನೀರಿನಲ್ಲಿ ಹೋಮ ಮಾಡಿದಂತಾಗುತ್ತದೆ. ಈಗ ನಾನು ಬದುಕುವುದಕ್ಕಿಂತಲೂ ಅವರ ಓದೇ ಮುಖ್ಯ, ಅವರ ಆಶಯ ನೆರವೇರಬೇಕೆಂದರೆ ನಾನು ಧುಮುಕಬಾರದು. ಬ್ರೇಕ್ ಫೆಯಿಲ್ ಎಂದು ಹೇಳು. ಈ ಒಂದು ಸುಳ್ಳು ಹೇಳಿದರೆ ನನಗೆ ಎಷ್ಟೋ ಉಪಕಾರ ಮಾಡಿದವನಾಗುತ್ತೀಯ. ನಿನಗೆ ಪುಣ್ಯ ಬರುತ್ತದೆ.'

ನನ್ನ ಕೈ ಹಿಡಿದು ಬೇಡಿಕೊಳ್ಳುತ್ತಿದ್ದಾನೆ. ನನಗೆ ಮಾತೇ ಹೊರಡುತ್ತಿಲ್ಲ. ಗೊತ್ತಿದ್ದೂ ಗೊತ್ತಿದ್ದೂ ವ್ಯಕ್ತಿಯನ್ನು ಕಳೆದುಕೊಳ್ಳಬೇಕಾ?

'ಇಲ್ಲ ಸತ್ಯಂ... ನೀನು ಬದುಕಬೇಕು... ಬಾ... ಇಬ್ಬರೂ ಒಟ್ಟಿಗೇ ಧುಮುಕೋಣ! ನಿನ್ನ ಮಕ್ಕಳಿಗೋಸ್ಕರವಾದರೂ ಬದುಕಬೇಕು. ಈ ಉದ್ಯೋಗವಲ್ಲದಿದ್ದರೆ ಮತ್ತೊಂದು... ಬಂದುಬಿಡು' ಎಂದು ಕೂಗುತ್ತಿದ್ದೇನೆ.

'ಕೃಷ್ಣ... ಹಾರಿಬಿಡು! ಈಗ ಏನೂ ಲಾಭವಿಲ್ಲ! ಗೋ ಜಂಪ್! ನಿನಗೆ ಇನ್ನೂ ಸಾಕಷ್ಟು ಭವಿಷ್ಯತ್ತಿದೆ, ಹೊರಟುಹೋಗು, ಧುಮುಕು! ನಾನು ಹ್ಯಾಂಡಲ್ ಹಿಡಿದುಕೊಂಡಿದ್ದೇನೆ.'

'ಧುಮುಕಿಬಿಡು ಬೇಗ! ಟೈಮಿಲ್ಲ...' ಕೂಗುತ್ತಿದ್ದಾನೆ ಸತ್ಯಂ.

ನಾನು ಹೊರಗೆ ನೋಡುತ್ತಿದ್ದೇನೆ. ಅಷ್ಟೇ! ಸತ್ಯಂ ಎರಡು ಕೈಗಳಿಂದ ಬಲವಾಗಿ ತಳ್ಳಿದ್ದು, ನಾನು ಮರುಕ್ಷಣ ಕೆಳಗೆ ಬಿದ್ದದ್ದು, ಒಂದು ಭೀಕರ ಶಬ್ದದೊಂದಿಗೆ ಸ್ಟೇಷನ್ನಿನಲ್ಲಿ ನಿಂತಿದ್ದ ಇನ್ನೊಂದು ರೈಲಿಗೆ ಢಿಕ್ಕಿ ಹೊಡೆದದ್ದನ್ನು ಮಾತ್ರ ನೋಡಿದ್ದಷ್ಟೆ.

ಸುತ್ತಲೂ ಕತ್ತಲೆ, ಆವರಿಸಿರುವ ಹೊಗೆ. ಸತ್ಯಂ... ನನ್ನ ಬಾಯಿಂದ ಬಂದ ಆರ್ತನಾದ ಗಾಳಿಯಲ್ಲಿ ಬೆರೆತುಹೋಯಿತು. ಕೆಲವೇ ಕ್ಷಣಗಳ ಹಿಂದೆ ನನ್ನನ್ನು ಪ್ರಾಣ ಉಳಿಸಲು ಹೊರಗೆ ತಳ್ಳಿದ ವ್ಯಕ್ತಿ ನನ್ನ ಕಣ್ಣೆದುರಿಗೇ ಬೂದಿಯಾಗುವುದಾ? ನಂಬಲಾಗುತ್ತಿಲ್ಲ. ನಾನು ಬದುಕಿದ್ದೇನೆ, ಆದರೆ ಪೆಟ್ಟಿನೊಂದಿಗೆ! ಸತ್ಯಂ... ಶವ ಕೂಡ ಕಾಣಿಸದಷ್ಟು ಬೆಂಕಿಯಲ್ಲಿ ಬೂದಿಯಾಗುತ್ತಿದ್ದಾನೆ. ಅತಿ ಭಯಂಕರ ದೃಶ್ಯ. ಸಂಕಟವಾಗುತ್ತಿದೆ.

ಮಕ್ಕಳ ಭವಿಷ್ಯತ್ತಿಗಾಗಿ ಪ್ರಾಣ ಪಣಕ್ಕಿಡುವುದಾ? ನನಗೊಂದೂ ಅರ್ಥವಾಗುತ್ತಿಲ್ಲ. ಒಂದು ಕ್ಷಣಕ್ಕೆ ಮುಂಚೆ ನನ್ನೊಂದಿಗೆ ಮಾತನಾಡಿದ ವ್ಯಕ್ತಿ ಸತ್ಯಂ ತ್ಯಾಗದ ಮುಂದೆ ನನ್ನ ದೇಹದಲ್ಲಿ ಮುರಿದ ಮೂಳೆಗಳ ನೋವು ಕೂಡ ಗೊತ್ತಾಗುತ್ತಿಲ್ಲ. ತಂದೆತಾಯಿಯರು ತಮ್ಮ ಮಕ್ಕಳ ಕುರಿತು ಇಷ್ಟು ಕಠಿಣ ನಿರ್ಧಾರ ತೆಗೆದುಕೊಳ್ಳುತ್ತಾರಾ? ನನ್ನನ್ನು ನಾನೇ ನಂಬಲಾಗುತ್ತಿಲ್ಲ. ಹೆತ್ತು ಬೆಳೆಸಿದ ತಂದೆತಾಯಿಯರನ್ನು ವೃದ್ಧಾಶ್ರಮಗಳಿಗೆ ದೂಕುತ್ತ, ಪ್ರಾಣ ಹೋದ ತಂದೆ ತಾಯಿಯರ ಶವ ನೋಡಲು ಮಾತ್ರ ಬರುತ್ತಿರುವ ಮಕ್ಕಳಿರುವ ಈ ಸಮಾಜದಲ್ಲಿ ಇಂತಹ ತ್ಯಾಗವನ್ನು ಹೇಗೆ ಅರ್ಥೈಸುವುದು? ಹೆತ್ತವರಿಗೆ, ಅವರ ಮಕ್ಕಳ ಮೇಲಿನ ಪ್ರೀತಿಯ ಮುಂದೆ, ಪ್ರಪಂಚದಲ್ಲಿ ಎಲ್ಲವೂ ತೃಣವೇ, ಕೊನೆಗೆ ತಮ್ಮ ಪ್ರಾಣವನ್ನೂ ಲೆಕ್ಕ ಮಾಡುವುದಿಲ್ಲ ಎಂಬುದಕ್ಕೆ ನಗ್ನಸತ್ಯ ಈ ದಿನ ಸತ್ಯಂ ತ್ಯಾಗ.

'ಅರೆ... ಇನ್ನೂ ಬದುಕಿದ್ದಾನೆ. ಎತ್ತಿಕೊಳ್ಳಿ, ಹಿಡಿದುಕೊಳ್ಳಿ' ಎನ್ನುತ್ತ ಯಾರೋ ಮಾತನಾಡುತ್ತಿರುವುದು ಮಾತ್ರ ಕೇಳಿಸುತ್ತಿದೆ. ಇಬ್ಬರು ವ್ಯಕ್ತಿಗಳು ನನ್ನನ್ನು ಹೊತ್ತುಕೊಂಡು ಹೋಗುತ್ತಿರುವುದು ಮಾತ್ರ ನೆನಪಿದೆ. ಪಕ್ಕದಲ್ಲಿಯೇ ಭಗಭಗನೆ ಉರಿಯುತ್ತಿರುವ ಉರಿ. ಅದರಲ್ಲಿ ಗುರುತು ಹಿಡಿಯದಿರುವಷ್ಟು ಮಾಂಸದ ಮುದ್ದೆಯಾಗಿ ಸತ್ಯಂ ಶವ!

ಪ್ರತಿಕ್ರಿಯಿಸಿ: feedback@sudha.co.in